<u>ಸಾಕ್ಷಿಯನ್ನು ದಿನಾಂಕ**: 31.05.2024** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಮುಂದುವರೆದ ಪಾಟೀ ಸವಾಲು</u>:- 2 ಮತ್ತು 7 ನೇ ಪ್ರತಿವಾದಿಗಳ ಪರ ವಕೀಲರಾದ ಶ್ರೀ. ಕೆ.ವಿ. ಮಹೇಂದ್ರ ಕುಮಾರ್ ರವರಿಂದಃ**

4 ನೇ ದಾವಾ ಆಸ್ತಿಗಳು ಅಂದರೆ ಸರ್ವೆ ನಂ.105 ರ ಜಮೀನು ನಮ್ಮ ತಾಯಿಯಾದ ಪುಟ್ಟಮ್ಮನ ಆಸ್ತಿಗಳು ಎಂದರೆ ಸರಿ. ಸರ್ವೆ ನಂ.2/3 (1 ನೇ ದಾವಾ ಜಮೀನು) ಸಹ ನನ್ನ ತಾಯಿಯ ಆಸ್ತಿ ಎಂದರೆ ಸರಿ. ನನ್ನ ತಾಯಿ 1 ಮತ್ತು 4 ನೇ ಆಸ್ತಿಗಳಿಗೆ ಸಂಬಂಧಿಸಿದಂತೆ ನನ್ನ ತಮ್ಮನಾದ 2 ನೇ ಪ್ರತಿವಾದಿ ಪರವಾಗಿ ಮರಣ ಶಾಸನ ಬರೆದಿದ್ದರು ಎಂದರೆ ನನಗೆ ಗೊತ್ತಿಲ್ಲ.

3 ನೇ ದಾವಾ ಜಮೀನನ್ನು 2 ನೇ ಪ್ರತಿವಾದಿ ಖರೀದಿ ಮಾಡಿದ್ದಾನೆ ಎನ್ನುವ ಸಲಹೆಗೆ ಸಾಕ್ಷಿಯು ನಮ್ಮ ತಾಯಿಯು ಬದುಕಿದ್ದಾಗ ಎಲ್ಲರೂ ಸೇರಿ ಖರೀದಿ ಮಾಡಿದ್ದೆವು ಎಂದು ಹೇಳುತ್ತಾರೆ. 3 ನೇ ದಾವಾ ಜಮೀನು 2 ನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. 3 ನೇ ದಾವಾ ಜಮೀನು 2 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ.

ನನ್ನ ತಾಯಿಯು ಸರ್ವೆ ನಂ.105/2 (4 ನೇ ದಾವಾ ಜಮೀನು) ನ್ನು 2 ನೇ ಪ್ರತಿವಾದಿಯ ಮಗನಾದ 7 ನೇ ಪ್ರತಿವಾದಿಗೆ ದಾನ ಮಾಡಿದ್ದಾಳೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಜಮೀನುಗಳಲ್ಲಿ ನನಗೆ ಯಾವುದೇ ಹಿಸ್ಸೆಯ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಆದರೂ ಸಹ ದಾವಾ ಜಮೀನುಗಳಲ್ಲಿ ಪಾಲು ಪಡೆಯುವ ಸಲುವಾಗಿ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ-</u> 10 ನೇ ಪ್ರತಿವಾದಿ ಪರ ವಕೀಲರು ಸಾಕ್ಷಿಯ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**